ಅ) ಶಿಗ್ಗಾಂವ್ ತಾಲ್ಲೂಕು ಬಂಕಾಪುರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಕ್ಕೆ ಎಷ್ಟು ಎಕರೆ ಜಮೀನು ತೆಗೆದುಕೊಳ್ಳಲಾಗಿದೆ.

ಆ) ಸದರಿ ಕಟ್ಟಡವನ್ನು ಕಟ್ಟಲು ಎಷ್ಟು ಹಣವನ್ನು ಆಯವ್ಯಯದಲ್ಲಿ ನಿಗಧಿಗೊಳಿಸಲಾಗಿದೆ.

ಇ) ಕಟ್ಟಡವನ್ನು ಬೇಗನೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡು ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು), :

ಅ) ನಾಲ್ಕು ಎಕರೆ

ಆ) 1996-97ನೇ ಸಾಲಿನ ಆಯವ್ಯಯದಲ್ಲಿ ರೂ. 3.00 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದು.

ಇ) ಕಟ್ಟಡವನ್ನು ಪ್ರಾರಂಭಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದು.

ರಾಜ್ಯದ ವಿಶ್ವ ವಿದ್ಯಾಲಯಗಳ ವಾರ್ಷಿಕ ವರದಿಗಳ ಕುರಿತು.

407 - ಶ್ರೀ ಜೆ.ಟಿ. ಪಾಟೀಲ (ಜೀಳಗಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳು ತಮ್ಮ ತಮ್ಮ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸುತ್ತಿವೆಯೇ?

ಆ) ಹಾಗಿಲ್ಲದಿದ್ದಲ್ಲಿ ಯಾವ ಯಾವ ಸಾಲಿನ ವರದಿಗಳನ್ನು ಯಾವ ಯಾವ ವಿಶ್ವವಿದ್ಯಾಲಯಗಳು ಸರ್ಕಾರಕ್ಕೆ ಸಲ್ಲಿಸಬೇಕಿದೆ.

ಇ) ಈ ವಿಳಂಬದ ಬಗ್ಗೆ ಸರ್ಕಾರ ಕೈಕೊಂಡಿರುವ ಕ್ರಮಗಳು ಯಾವುವು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ವಾರ್ಷಿಕ ವರದಿ

	ವಿಶ್ವವಿದ್ಯಾಲಯ	ಯಾವ ವರ್ಷಕ್ಕೆ ಬಂದಿಲ್ಲ	
1)	ಮೈಸೂರು	1994-95	1995-96
2)	ಬೆಂಗಳೂರು	1994-95	1995-96
3)	ಮಂಗಳೂರು	ಅದೇ	ಅದೇ
4)	ಕರ್ನಾಟಕ	ಅದೇ	ಅದೇ

5)	ಗುಲ್ಬರ್ಗಾ	ಅದೇ	ಅದೇ
6)	ಕುವೆಂಪು	1988-98 ರಿಂದ ಯಾವುದೂ ಬಂದಿಲ್ಲ.	
7)	ಕನ್ನಡ	1991-92 ರಿಂದ ಯಾವುದೂ ಬಂದಿಲ್ಲ. ಲೆಕ್ಕ ಪರಿಶೋಧನಾ ವರದಿ	

ವಿಶ್ವವಿದ್ಯಾಲಯ		ಯಾವ ವರ್ಷ ಬಂದಿಲ್ಲ	
1)	ಮೈಸೂರು	1994-95	
2)	ಬೆಂಗಳೂರು	1992-93	93-94, 94-95
3)	ಮಂಗಳೂರು	1993-94	94-95
4)	ಕರ್ನಾಟಕ	1994-95	
5)	ಗುಲ್ಬರ್ಗಾ	1993-94	94-95
6)	ಕುವೆಂಪು	1988-89 ರಿಂದ ಯಾವುದೂ ಬಂದಿಲ್ಲ	
7)	ಕನ್ನಡ	1991-92 ರಿಂದ ಯಾವುದೂ ಬಂದಿಲ್ಲ.	

ಇ) ದಿನಾಂಕ 8-11-95 ರಂದು ಕಾಗದ ಪತ್ರಗಳ ಸಮಿತಿಯ ಸಭೆಯಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರಿಗೆ ಮತ್ತು ಆರ್ಥಿಕ ಅಧಿಕಾರಿಗಳಿಗೆ ವರದಿಗಳನ್ನು ನಿಗದಿತ ಕಾಲಮಿತಿಯೊಳಗೆ ಸಲ್ಲಿಸುವಂತೆ ಸ್ಪಷ್ಟ ಸೂಚನೆ ನೀಡಲಾಗಿದೆ. ಈ ಬಗ್ಗೆ ದಿನಾಂಕ 16-1-96 ಸಂಖ್ಯೆ: ಇಡಿ 17 ಯುಎಸಐ 96ರ ಸುತ್ತೋಲೆಯನ್ನು ಸಹ ಹೊರಡಿಸಲಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ.

408 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲೆಗಳ ಮತ್ತು ಪ್ರೌಢಶಾಲೆಗಳ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದೇ.

ಆ) ಹಾಗಿದ್ದಲ್ಲಿ, ಮಾಡದಿರಲು ಕಾರಣವೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಪ್ರಸ್ತ 21637 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು, 15707 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 2017 ಸರ್ಕಾರಿ ಪ್ರೌಢ ಶಾಲೆಗಳಿದ್ದು, ಇವುಗಳಲ್ಲಿ 5541 ಕಿರಿಯ ಪ್ರಾಥಮಿಕ ಶಾಲೆ, 6082 ಹಿರಿಯ ಪ್ರಾಥಮಿಕ ಶಾಲೆ ಹಾಗೂ 961 ಪ್ರೌಢ ಶಾಲೆಗಳಿಗೆ ಮಾತ್ರ ಕುಡಿಯುವ ನೀರಿನ ಸೌಲಭ್ಯವಿರುತ್ತದೆ. ಉಳಿದ ಶಾಲೆಗಳಿಗೂ ಈ